
# AMMAN-TRY
GROUP

BILLETS | TMT BARS | RINGS

25 YEARS
1999 - 2024




**ಕಡಿಮೆ ಫಾಸ್ಫರಸ್ ಕಡಿಮೆ ಸಲ್ಫರ್**

ಹೆಚ್ಚಿನ ನಿಖರತೆಯೊಂದಿಗೆ ಒಂದು ಹೊಸ ತಂತ್ರಜ್ಞಾನ

CERTIFIED
ISO 9001:2015
ISO 14001:2015
ISO 45001:2018

BUREAU VERITAS
UKAS MANAGEMENT SYSTEMS 0008

IS:14650 IS:1786 IS:1239 IS:4923

## ಗುಣಲಕ್ಷಣಗಳು 550 D

# LPLS

**(ಕಡಿಮೆ ಫಾಸ್ಫರಸ್ ಕಡಿಮೆ ಸಲ್ಫರ್ - ಲೋ ಫಾಸ್ಫರಸ್ ಲೋ ಸಲ್ಫರ್) :**

ತಜ್ಞರ ಅಭಿಪ್ರಾಯದ ಪ್ರಕಾರ, ಸಲ್ಫರ್ ಮತ್ತು ಫಾಸ್ಫರಸ್ ಎಂಬ ಎರಡು ಅಂಶಗಳು ಹೆಚ್ಚು ಉಕ್ಕಿನ ಬಳಕೆಯಿರುವ ಕಟ್ಟಡಗಳ ದೀರ್ಘಾಯುಷ್ಯಕ್ಕೆ ಹಾನಿಕಾರಕವಾಗಿವೆ. ಈ ಅಂಶಗಳು TMT ಬಾರ್ಸ್ ಗಟ್ಟಿತನ ಮತ್ತು ನಮ್ಯತೆಯನ್ನು ಕಡಿಮೆಗೊಳಿಸಿ, ಅವು ಸುಲಭವಾಗಿ ಮುರಿಯುವ ಸಾಧ್ಯತೆಯನ್ನು ಹೆಚ್ಚಿಸುತ್ತವೆ. ಇದರಿಂದ ಕಟ್ಟಡದ ಬಾಳಿಕೆ ಮತ್ತು ಸುರಕ್ಷತೆ ದೀರ್ಘಾವಧಿಯಲ್ಲಿ ಪ್ರಶ್ನಾರ್ಹವಾಗುವ ಸಾಧ್ಯತೆ ಉಂಟಾಗುತ್ತದೆ. ನಿಮ್ಮ ಕಟ್ಟಡಗಳಿಗೆ ಹೆಚ್ಚಿನ ಬಲ, ಸುರಕ್ಷತೆ ಹಾಗೂ ದೀರ್ಘಕಾಲೀನ ಬಾಳಿಕೆಯನ್ನು ಖಚಿತಪಡಿಸಲು, AMMAN-TRY TMT ಬಾರ್‌ಗಳನ್ನು ಅತ್ಯುನ್ನತ ನಿಖರತೆಯೊಂದಿಗೆ 550D ಗ್ರೇಡ್ ಹಾಗೂ LPLS ತಂತ್ರಜ್ಞಾನ ಬಳಸಿ ತಯಾರಿಸಲಾಗುತ್ತದೆ. ಇದರಿಂದ ಕಡಿಮೆ ಸಲ್ಫರ್ ಮತ್ತು ಕಡಿಮೆ ಫಾಸ್ಫರಸ್ ಗುಣಮಟ್ಟವನ್ನು ಖಚಿತಪಡಿಸಿ, ಅತ್ಯುತ್ತಮ ಶಕ್ತಿ, ಹೆಚ್ಚಿನ ನಮ್ಯತೆ ಮತ್ತು ದೀರ್ಘಕಾಲೀನ ಕಾರ್ಯಕ್ಷಮತೆಯನ್ನು ಒದಗಿಸುತ್ತದೆ.

## AMMAN-TRY
## TMT ಬಾರ್‌ಗಳ ಯಶಸ್ಸು

## ಉಕ್ಕಿನ ತಂತ್ರಜ್ಞಾನದಲ್ಲಿ ಅಗ್ರಗಾಮಿ

ಕಳೆದ 48 ವರ್ಷಗಳಿಂದ AMMAN-TRY ಸ್ಟೀಲ್ ಗ್ರೂಪ್ ಭಾರತದಲ್ಲಿ ನವೀನ ತಂತ್ರಜ್ಞಾನಗಳಿಗೆ ಮುಂಚೂಣಿಯಾಗಿದ್ದು ಗುಣಮಟ್ಟ ಮತ್ತು ಶ್ರೇಷ್ಠತೆಯನ್ನು ಖಾತ್ರಿಪಡಿಸುತ್ತಾ TMT ಬಾರ್‌ಗಳನ್ನು ತಯಾರಿಸುತ್ತಿದೆ. TMT, CRS, ರಿಂಗ್ಸ್, 500D ಮತ್ತು 550D ಉಕ್ಕಿನ ಕಂಬಿಗಳನ್ನು ಭಾರತದಲ್ಲಿ ಮೊದಲ ಬಾರಿಗೆ ಪರಿಚಯಿಸಿದ ಹೆಗ್ಗಳಿಕೆ AMMAN-TRY ಗ್ರೂಪ್‌ಗೆ ಸಲ್ಲುತ್ತದೆ. ತನ್ನ ನಿರಂತರ ನಾವೀನ್ಯತೆ ಮತ್ತು ಗುಣಮಟ್ಟದ ಮೂಲಕ ಸಂಸ್ಥೆಯು ವರ್ಷಗಳಿಂದ ಯಶಸ್ಸಿನ ಶಿಖರವನ್ನು ಏರಿದೆ.

ಭಾರತದಲ್ಲಿ ಭೌತಿಕ ಮೂಲಸೌಕರ್ಯಗಳ ಅಭಿವೃದ್ಧಿ ವೇಗವಾಗಿ ವಿಸ್ತರಿಸುತ್ತಿದ್ದು, ಉಕ್ಕಿನ ಬೇಡಿಕೆಯೂ ಗಣನೀಯವಾಗಿ ಹೆಚ್ಚುತ್ತಿದೆ. ಈ ಬೆಳವಣಿಗೆಗೆ ಅನುಗುಣವಾಗಿ AMMAN-TRY ಗ್ರೂಪ್ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು TMT ಬಾರ್‌ಗಳ ಉತ್ಪಾದನಾ ಸಾಮರ್ಥ್ಯವನ್ನು ವಿಸ್ತರಿಸಿದೆ. ಜಪಾನ್‌ನ KOBE ಬ್ಲಾಕ್ ಮಿಲ್ ತಂತ್ರಜ್ಞಾನದೊಂದಿಗೆ ದಕ್ಷಿಣ ಭಾರತದ ಅತಿದೊಡ್ಡ ಸಂಪೂರ್ಣ ಸ್ವಯಂಚಾಲಿತ ಹೈ-ಸ್ಪೀಡ್ ರೋಲಿಂಗ್ AMMAN-TRY ಗ್ರೂಪ್ ಯಶಸ್ವಿಯಾಗಿ ಸ್ಥಾಪಿಸಿದೆ.

ಮೂಲಸೌಕರ್ಯಗಳ ಅಭಿವೃದ್ಧಿ ವೇಗವಾಗಿ ಹೆಚ್ಚಾದಂತೆ ನಾವು ಸಹ ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದೇವೆ. ಈ ತಂತ್ರಜ್ಞಾನದ ಮೂಲಕ ಕರಗಿದ ಉಕ್ಕನ್ನು (Molten Metal) ನೇರವಾಗಿ ಬಿಲ್ಲೆಟ್‌ಗಳಾಗಿ ಪರಿವರ್ತಿಸಿ ಅಲ್ಲಿಂದಲೇ ಉನ್ನತ ಗುಣಮಟ್ಟದ TMT ಬಾರ್‌ಗಳನ್ನು ಉತ್ಪಾದಿಸಲಾಗುತ್ತದೆ. ಗ್ರಾಹಕರು ನಮ್ಮಿಂದ ನಿರೀಕ್ಷಿಸುವ ಅತ್ಯುತ್ತಮ ಗುಣಮಟ್ಟ ಮತ್ತು ಸೇವೆಯನ್ನು ನಿರಂತರವಾಗಿ ಒದಗಿಸುವ ಬದ್ಧತೆಯನ್ನು ನಾವು ಈ ತಂತ್ರಜ್ಞಾನದ ಮೂಲಕ ಮತ್ತಷ್ಟು ಬಲಪಡಿಸುತ್ತೇವೆ.



## ಹಸಿರು ಉಕ್ಕು - 5 ಸ್ಟಾರ್ ರೇಟಿಂಗ್ ಉಜ್ವಲದು ★ ★ ★ ★ ★

AMMAN-TRY–ಸ್ಟೀಲ್‌ಗೆ ಭಾರತ ಸರ್ಕಾರದ ಉಕ್ಕು ಸಚಿವಾಲಯದ ಆಧೀನದಲ್ಲಿರುವ ನವದೆಹಲಿ ಮೂಲಕ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೆಕೆಂಡರಿ ಸ್ಟೀಲ್ ಟೆಕ್ನಾಲಜಿ (NISST), ವತಿಯಿಂದ 5–ಸ್ಟಾರ್ ರೇಟಿಂಗ್‌ನೊಂದಿಗೆ ಪ್ರತಿಷ್ಠಿತ ರಾಷ್ಟ್ರೀಯ ಗ್ರೀನ್ ಸ್ಟೀಲ್ ಪ್ರಮಾಣಪತ್ರ ಲಭಿಸಿರುವುದನ್ನು ನಾವು ಹೆಮ್ಮೆಯಿಂದ ಘೋಷಿಸುತ್ತೇವೆ. ಈ ಗೌರವವು ಪರಿಸರ ಸ್ನೇಹಿ ಹಾಗೂ ಸುಸ್ಥಿರ ಉಕ್ಕು ಉತ್ಪಾದನೆಯತ್ತ ನಮ್ಮ ದೃಢ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.

ಈ ಸಾಧನೆಯು ಗುಣಮಟ್ಟ, ನಾವೀನ್ಯತೆ ಮತ್ತು ಸುಸ್ಥಿರ ಮೂಲಕೌಕರ್ಯ ಅಭಿವೃದ್ಧಿಯತ್ತ ನಮ್ಮ ಅಚಲ ಸಮರ್ಪಣೆಗೆ ಸಾಕ್ಷಿಯಾಗಿದೆ. ಈ ಮಾನ್ಯತೆಯೊಂದಿಗೆ AMMAN-TRY ಹಸಿರು ಕಟ್ಟಡಗಳು, ಪರಿಸರ ಸ್ನೇಹಿ ನಿರ್ಮಾಣ ಮತ್ತು ಸ್ವಚ್ಛ, ಸುಸ್ಥಿರ ಭವಿಷ್ಯ ನಿರ್ಮಾಣಕ್ಕೆ ತನ್ನ ಕೊಡುಗೆಯನ್ನು ನಿರಂತರವಾಗಿ ಮುಂದುವರಿಸುತ್ತಿದೆ.

ನಮ್ಮ TMT ಬಾರ್‌ಗಳಿಗೆ ಸುಸ್ಥಿರ ತಯಾರಿಕೆ, ಕಡಿಮೆ ಕಾರ್ಬನ್ ಹೊರಸೂಸುವಿಕೆ, ಇಂಧನ ದಕ್ಷತೆ ಹಾಗೂ ಪರಿಸರ ಸ್ನೇಹಿ ಉತ್ಪಾದನಾ ವಿಧಾನಗಳಿಗಾಗಿ 5 ಸ್ಟಾರ್ ರೇಟಿಂಗ್ ಲಭಿಸಿದೆ.



5 STAR
– RATING –

GREEN
STEEL
-CERTIFIED-



इस्पात मंत्रालय
MINISTRY OF
STEEL
सत्यमेव जयते

- 5 ಸ್ಟಾರ್ ರೇಟಿಂಗ್ ಪಡೆದ ಗ್ರೀನ್ ಸ್ಟೀಲ್ ಪ್ರಮಾಣಪತ್ರ ದಕ್ಷಿಣ ಭಾರತದ ಪ್ರಮುಖ TMT ಬಾರ್‌ಗಳ ತಯಾರಕರು.
- ಕಡಿಮೆ $CO_2$ ಹೊರಸೂಸುವಿಕೆ, ಅತ್ಯುತ್ತಮ ಗುಣಮಟ್ಟ.
- ಕಡಿಮೆ $CO_2$ ಹೆಜ್ಜೆಗುರುತು ಹೆಚ್ಚಿನ ಉತ್ಪಾದನಾ ಸಾಮರ್ಥ್ಯ
- ISO 14001:2015 ಪರಿಸರ ನಿರ್ವಹಣಾ ವ್ಯವಸ್ಥೆಯ ಪ್ರಮಾಣೀಕರಣ ಪಡೆದ ಸಂಸ್ಥೆ.

## ಉಕ್ಕು ಕರಗಿಸುವ ಘಟಕ (ಸ್ಟೀಲ್ ಮೆಲ್ಟಿಂಗ್ ಯೂನಿಟ್)

30 ಟನ್ ಮತ್ತು 25 ಟನ್ ಸಾಮರ್ಥ್ಯದ ಎರಡು ಇಂಡಕ್ಷನ್ ಫರ್ನೇಸ್‌ಗಳನ್ನು ಹೊಂದಿರುವ ನಮ್ಮ ಸ್ಟೀಲ್ ಮೆಲ್ಟಿಂಗ್ ಯೂನಿಟ್‌ಗಳಲ್ಲಿ ಸ್ಪಾಂಜ್ ಐರನ್, ಫೆರೋ ಸಿಲಿಕಾನ್, ಸಿಲಿಕೋ ಮ್ಯಾಂಗನೀಸ್ ಮತ್ತು ಅಲ್ಯೂಮಿನಿಯ ಸೇರಿದಂತೆ ಅಗತ್ಯ ಪ್ರಮಾಣದ ರಾಸಾಯನಿಕ ಅಂಶಗಳನ್ನು ಸೇರಿಸಿ ಕರಗಿಸಲಾಗುತ್ತದೆ. ಈ ಪ್ರಕ್ರಿಯೆಯ ಮೂಲಕ ಉತ್ತಮ ಗುಣಮಟ್ಟದ ಬಿಲ್ಲೆಟ್‌ಗಳನ್ನು ತಯಾರಿಸಲಾಗುತ್ತದೆ.

## ಹಾಟ್ ಚಾರ್ಜಿಂಗ್ ವಿಧಾನ

ಬಿಲ್ಲೆಟ್‌ಗಳಲ್ಲಿ ಸಮಾನ ಉಷ್ಣಾಂಶವನ್ನು ಕಾಯ್ದುಕೊಳ್ಳುವುದರಿಂದ TMT ಬಾರ್‌ಗಳ ಉತ್ಪಾದನೆಗೆ ಅಗತ್ಯವಾದ ರಾಸಾಯನಿಕ ಗುಣಲಕ್ಷಣಗಳಲ್ಲಿ ಏಕರೂಪತೆ ದೊರೆಯುತ್ತದೆ. AMMAN-TRY ನಲ್ಲಿ ನಾವು ಉತ್ಪಾದನೆಯ ಪ್ರತಿಯೊಂದು ಹಂತದಲ್ಲೂ ಗುಣಮಟ್ಟಕ್ಕೆ ಅತ್ಯುನ್ನತ ಆದ್ಯತೆ ನೀಡುತ್ತೇವೆ. ಪ್ರತಿಯೊಂದು ಹಂತದಲ್ಲೂ ಕಟ್ಟುನಿಟ್ಟಿನ ಗುಣಮಟ್ಟದ ಪರಿಶೀಲನೆ ನಡೆಸುವುದರಿಂದ AMMAN-TRY TMT ಬಾರ್‌ಗಳು ಉತ್ಪಾದನಾ ಪ್ರಕ್ರಿಯೆಯಲ್ಲಿ ಸ್ಥಿರತೆ, ಗುಣಮಟ್ಟದಲ್ಲಿ ಏಕರೂಪತೆ, ಹೆಚ್ಚಿನ ಬಲ, ಅತ್ಯುತ್ತಮ ನಮ್ಯತೆ ಮತ್ತು ಡಕ್ಟಿಲಿಟಿ – ತಂತಿಯಂತೆ ಎಳೆಯಬಹುದಾದ ನಮತೆಯು ಹೊಂದಿರುವಂತೆ ತಯಾರಾಗುತ್ತವೆ.

## ಹಾರಿಜಾಂಟಲ್-ವರ್ಟಿಕಲ್ ಸ್ಟ್ಯಾಂಡ್


ನಮ್ಮ ಅತ್ಯಾಧುನಿಕ ನೂತನ ರೋಲಿಂಗ್ ಮಿಲ್‌ನಲ್ಲಿ ಸುಧಾರಿತ ತಂತ್ರಜ್ಞಾನದೊಂದಿಗೆ ಹಾರಿಜಾಂಟಲ್ ಮತ್ತು ವರ್ಟಿಕಲ್ ರೋಲಿಂಗ್ ವಿಧಾನಗಳನ್ನು ಅಳವಡಿಸಿಕೊಂಡಿದ್ದೇವೆ. ಈ ಪ್ರಕ್ರಿಯೆಯಲ್ಲಿ, ಕರಗಿದ ಉಕ್ಕನ್ನು (ಹಾಟ್ ಮೋಲ್ಟನ್ ಮೆಟಲ್) ಬಿಲ್ಲೆಟ್‌ಗಳಾಗಿ ಪರಿವರ್ತಿಸಿ ಅದರ ಉಷ್ಣತೆ ಕಡಿಮೆಯಾಗುವ ಮುನ್ನವೇ ಸ್ವಯಂಚಾಲಿತವಾಗಿ ಉಕ್ಕಿನ ಕಂಬಿಯಾಗಿ ರೋಲ್ ಮಾಡಲಾಗುತ್ತದೆ.

## TMT ಕ್ವೆಂಚಿಂಗ್


ಟೆಂಪ್‌ಕೋರ್ ತಂತ್ರಜ್ಞಾನದಲ್ಲಿ, TMT ಬಾರ್‌ಗಳನ್ನು ಅತ್ಯಂತ ವೇಗವಾಗಿ ತಂಪುಗೊಳಿಸುವ ಪ್ರಕ್ರಿಯೆಯನ್ನು ಅನುಸರಿಸಲಾಗುತ್ತದೆ. ಇದರಿಂದ ಕಂಬಿಗಳ ಮೈಕ್ರೋಸ್ಟ್ರಕ್ಚರ್ ಅತ್ಯುತ್ತಮವಾಗಿ ರೂಪುಗೊಂಡು ಅವುಗಳಿಗೆ ಹೆಚ್ಚಿನ ಬಲ, ಗುಣಮಟ್ಟ ಮತ್ತು ಬಾಳಿಕೆ ದೊರೆಯುತ್ತದೆ.

## ಸ್ವಯಂಚಾಲಿತ ಕೂಲಿಂಗ್ ಬೆಡ್

ಸ್ವಯಂಚಾಲಿತ ಕೂಲಿಂಗ್ ಬೆಡ್‌ನಲ್ಲಿ TMT ಬಾರ್‌ಗಳನ್ನು ಒಂದಕ್ಕೊಂದು ಉಜ್ಜಿಕೊಳ್ಳದಂತೆ ನೈಸರ್ಗಿಕ ಗಾಳಿಯ ಸಂಚಾರದಲ್ಲಿ ತಂಪಾಗಲು ಇರಿಸಲಾಗುತ್ತದೆ. ಈ ಪ್ರಕ್ರಿಯೆಯಿಂದ ಕಂಬಿಗಳ ಮೈಕ್ರೋಸ್ಟ್ರಕ್ಚರ್ ಅತ್ಯುತ್ತಮವಾಗಿ ರೂಪುಗೊಂಡು ಅವುಗಳಿಗೆ ಹೆಚ್ಚಿನ ಬಲ, ನಮ್ಯತೆ ಹಾಗೂ ಡಕ್ಟಿಲಿಟಿ ದೊರೆಯುತ್ತದೆ.




ಕಬ್ಬಿಣದ ಅದಿರು / ಸ್ಪಾಂಜ್ ಕಬ್ಬಿಣ




ಉಕ್ಕು ಕರಗಿಸುವ ಫರ್ನೇಸ್

## ಮೈಕ್ರೋಸ್ಟ್ರಕ್ಚರ್ (ಟಿ.ಎಂ.ರಿಂಗ್)




ಮೆಟಲರ್ಜಿಕಲ್ ಮೈಕ್ರೋಸ್ಕೋಪ್‌ಗಳನ್ನು ಬಳಸಿ TMT ಬಾರ್‌ಗಳಲ್ಲಿರುವ ಮೂರು ಮೈಕ್ರೋಸ್ಟ್ರಕ್ಚರ್ ಪದರಗಳ (Tempered Martensite Ring) ರಚನೆಯ ಏಕರೂಪತೆ ಹಾಗೂ ಅವುಗಳ ಸರಿಯಾದ ಪ್ರಮಾಣವನ್ನು ಪರಿಶೀಲಿಸಲಾಗುತ್ತದೆ. ಇದರಿಂದ ಉತ್ಪಾದನೆಯಾಗುವ ಉಕ್ಕು ವೈಜ್ಞಾನಿಕ BIS ಮಾನದಂಡಗಳು ಮತ್ತು ಗುಣಮಟ್ಟದ ನಿಯಮಗಳಿಗೆ ಸಂಪೂರ್ಣವಾಗಿ ಅನುಗುಣವಾಗಿರುವುದನ್ನು ಖಚಿತಪಡಿಸಲಾಗುತ್ತದೆ. ಈ ಎಲ್ಲಾ ಗುಣಮಟ್ಟದ ಮಾನದಂಡಗಳಿಗೆ AMMAN-TRY ಗ್ರೂಪ್ ಅತ್ಯುನ್ನದ ಆದ್ಯತೆ ನೀಡುತ್ತದೆ.

## ಸ್ಪೆಕ್ಟ್ರೋಮೀಟರ್

ನಮ್ಮ ಅತ್ಯಾಧುನಿಕ ಸ್ಪೆಕ್ಟ್ರೋಮೀಟರ್ ಬಿಲ್ಲೆಟ್‌ಗಳಲ್ಲಿರುವ ಎಲ್ಲಾ ರಾಸಾಯನಿಕ ಅಂಶಗಳನ್ನು ಅತ್ಯಂತ ನಿಖರವಾಗಿ ಹಾಗೂ ಕ್ಷಿಪ್ರವಾಗಿ ಪರೀಕ್ಷಿಸುತ್ತದೆ.







## 1000 KN UTM

1000 KN UTM (ಡಿಜಿಟಲ್ ಮತ್ತು ಅನಲಾಗ್) ಬಳಸಿ ಬಾರ್‌ಗಳ ಬಲವನ್ನು ಪರಿಶೀಲಿಸಲಾಗುತ್ತದೆ ಮತ್ತು ದೃಢೀಕರಿಸಲಾಗುತ್ತದೆ.

**ಅಪಾರ ಬಲ**
**ಪರಿಪೂರ್ಣ ಪರೀಕ್ಷೆಯಿಂದ**
**ಖಚಿತವಾದ ಶ್ರೇಷ್ಠತೆ**

3



ಬಿಲ್ಲೆಟ್ಸ್

4



ಜಪಾನಿನ ಕೋಬೆ ಬ್ಲಾಕ್ ಮಿಲ್

## 15-20% ಉಕ್ಕಿನ ಉಳಿತಾಯ

ಉನ್ನತ ಬಲ ಮತ್ತು ಅತ್ಯುತ್ತಮ ಡಕ್ಟಿಲಿಟಿ ಹೊಂದಿರುವ TMT ಬಾರ್‌ಗಳನ್ನು ಬಳಸಿದಾಗ ವಿವಿಧ ರೀತಿಯ ಕಟ್ಟಡ ನಿರ್ಮಾಣಗಳಲ್ಲಿ ಕಾಂಕ್ರೀಟ್‌ನಲ್ಲಿ ಬಳಸುವ ಉಕ್ಕಿನ ಪ್ರಮಾಣವನ್ನು ಕಡಿಮೆ ಮಾಡುವ ಅವಕಾಶ ದೊರೆಯುತ್ತದೆ.

ಅನುಭವವುಳ್ಳ ಸಿವಿಲ್ ಇಂಜಿನಿಯರ್‌ಗಳು ಮತ್ತು ವಾಸ್ತುಶಿಲ್ಪಿಗಳ ಮಾರ್ಗದರ್ಶನದೊಂದಿಗೆ 550D ಗ್ರೇಡ್ TMT ಬಾರ್‌ಗಳನ್ನು ಬಳಸುವುದರಿಂದ ಹಿಂದಿನ Fe500 ಗ್ರೇಡ್ TMT ಬಾರ್‌ಗಳೊಂದಿಗೆ ಹೋಲಿಸಿದರೆ ಸುಮಾರು 15% ರಿಂದ 20% ರಷ್ಟು ಉಕ್ಕಿನ ಉಳಿತಾಯವನ್ನು ಪರಿಣಾಮಕಾರಿಯಾಗಿ ಸಾಧಿಸಬಹುದು.


## ಗ್ರಾಹಕರ ತೃಪ್ತಿ

ಮೂಲಸೌಕರ್ಯ ಕ್ಷೇತ್ರದ ಅಗತ್ಯಗಳು ನಿರಂತರವಾಗಿ ಬದಲಾಗುತ್ತಿರುವ ಸಂದರ್ಭದಲ್ಲಿ ಗ್ರಾಹಕರ ನಿರೀಕ್ಷೆಗಳನ್ನು ಸಂಪೂರ್ಣವಾಗಿ ಪೂರೈಸಲು ಹಾಗೂ ದೋಷರಹಿತ ಉತ್ಪನ್ನಗಳನ್ನು ತಯಾರಿಸಲು ನಾವು ಈ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿದ್ದೇವೆ.

### ಗ್ರಾಹಕ ನಿರೀಕ್ಷೆಗಳು

| | | | |
|---|---|---|---|
| TMT ಬಾರ್‌ಗಳಲ್ಲಿ ಏಕರೂಪದ ಬಲ, ನಮ್ಯತೆ ಹಾಗೂ ಡಕ್ಟಿಲಿಟಿ | TMT ಬಾರ್‌ಗಳ ನಯವಾದ ಮೇಲ್ಮೈ | ನ್ಯಾಯೋಚಿತ ಬೆಲೆ | ಗ್ರಾಹಕರ ನಿರೀಕ್ಷೆಗಳು |










### ಸಂಪೂರ್ಣ ಸ್ವಯಂಚಾಲಿತ ಹಾರಿಜಾಂಟಲ್/ವರ್ಟಿಕಲ್ ನೋ ಟ್ವಿಸ್ಟ್ ಬ್ಲಾಕ್ ಮಿಲ್ ತಂತ್ರಜ್ಞಾನ



## ನೋ ಟ್ವಿಸ್ಟ್ -ನೋ ರಿಸ್ಕ್

## ರಾಸಾಯನಿಕ ಅಂಶಗಳು (%)

| ಅಂಶಗಳು | IS 1786:2008 Fe 550 D | ಅಮ್ಮಾನ್-ಟ್ರೈ Fe-550 "D" | ಇತರ ಕೆಲವು TMT Fe-550* |
|---|---|---|---|
| ಕಾರ್ಬನ್ (C) | 0.25 (ಗರಿಷ್ಠ) | 0.23 (ಗರಿಷ್ಠ) | 0.30 |
| ಸಲ್ಫರ್ (S) | 0.040 (ಗರಿಷ್ಠ) | 0.035 (ಗರಿಷ್ಠ) | 0.055 |
| ಫಾಸ್ಫರಸ್ (P) | 0.040 (ಗರಿಷ್ಠ) | 0.035 (ಗರಿಷ್ಠ) | 0.055 |
| S+P | 0.075 (ಗರಿಷ್ಠ) | 0.070 (ಗರಿಷ್ಠ) | 0.105 |
| ಕಾರ್ಬನ್ ಈಕ್ವಿವಲೆಂಟ್ (C.E) | 0.61 (ಗರಿಷ್ಠ) | 0.45 (ಗರಿಷ್ಠ) | — |

*ನಮ್ಮ ಮಾರ್ಕೆಟ್ ವಿಶ್ಲೇಷಣೆಯ ಪ್ರಕಾರ

## ಯಾಂತ್ರಿಕ ಗುಣಲಕ್ಷಣಗಳು

| ಅಂಶಗಳು | IS 1786:2008 Fe 550 D | ಅಮ್ಮಾನ್-ಟ್ರೈ Fe-550 "D" | ಇತರ ಕೆಲವು TMT Fe-550* |
|---|---|---|---|
| ಯೀಲ್ಡ್ ಸಾಮರ್ಥ್ಯ ($N/mm^2$) Y.S | 550 (ಕನಿಷ್ಠ) | 550 - 590 | 500 - 680** |
| ತನನ ಸಾಮರ್ಥ್ಯ ($N/mm^2$) T.S | 600 (ಕನಿಷ್ಠ) | 660 - 700 | 545 - 750 |
| ಉದ್ದೀಕರಣ (%) | 14.5 (ಕನಿಷ್ಠ) | 18 (ಕನಿಷ್ಠ) | 12 |
| ಒಟ್ಟು ಉದ್ದೀಕರಣ (%) | 5 | 7 (ಕನಿಷ್ಠ) | N.A |
| T.S/Y.S ಅನುಪಾತ (ಕನಿಷ್ಠ) | 1.08 | 1.18 | 1.08 |
| ಬೆಂಡ್ ಟೆಸ್ಟ್ (ಮ್ಯಾಂಡ್ರಲ್ ಗಾತ್ರ) (20 ಎಂಎಂ ವರೆಗೆ ಮತ್ತು ಒಳಗೊಂಡಂತೆ) | 4D | 3D | 5D |
| ಬೆಂಡ್ ಟೆಸ್ಟ್ (ಮ್ಯಾಂಡ್ರಲ್ ಗಾತ್ರ) (20 ಎಂಎಂ ವರೆಗೆ) | 5D | 4D | 6D |

*ನಮ್ಮ ಮಾರ್ಕೆಟ್ ವಿಶ್ಲೇಷಣೆಯ ಪ್ರಕಾರ. **ಅಸಹಜ ಫಲಿತಾಂಶ

## ಒಂದು ಬಾರ್‌ಗೆ ನಾಮಿನಲ್ ಮಾಸ್ (ಕೆಜಿ/40ಅಡಿ)

| ವಿಭಾಗ | ಕನಿಷ್ಠ | ಸಹಜ | ಗರಿಷ್ಠ | ಒಂದು ಬಂಡಲ್‌ನಲ್ಲಿರುವ ಬಾರ್‌ಗಳು |
|---|---|---|---|---|
| 6mm | 2.513 | 2.708 | 2.904 | 20 |
| 8mm | 4.477 | 4.819 | 5.161 | 10 |
| 10mm | 7.003 | 7.527 | 8.052 | 7 |
| 12mm | 10.285 | 10.834 | 11.370 | 5 |
| 16mm | 18.300 | 19.264 | 20.228 | 3 |
| 20mm | 29.195 | 30.097 | 31.000 | 2 |
| 25mm | 45.616 | 47.031 | 48.446 | 1 |
| 32mm | 74.700 | 77.000 | 79.300 | 1 |

ಸೂಚನೆ : AMMAN-TRY ಉಕ್ಕಿನ ಕಂಬಿಗಳು 40 ಅಡಿ ಉದ್ದದಲ್ಲಿರುತ್ತವೆ (12.2 ಮೀಟರ್ ಉದ್ದ)

## AMMAN-TRY / TMT ಬಾರ್ಸ್

# ಅನುಮೋದಿತ ಕೇಂದ್ರ ಮತ್ತು ರಾಜ್ಯ (ಸರ್ಕಾರಿ, ಖಾಸಗಿ) ಇಲಾಖೆಗಳು

BUREAU OF INDIAN STANDARDS MARK | INDIAN STANDARDS INSTITUTION MARK

INTEGRATED MANAGEMENT SYSTEM (IMS): ISO 9001 Quality | ISO 14001 Environment | ISO 45001 Health & Safety

इस्पात मंत्रालय MINISTRY OF STEEL

NISST

CONSTRUCTION INDUSTRY DEVELOPMENT COUNCIL

CHENNAI METRO RAIL LIMITED

इसरो isro

LARSEN & TOUBRO

TAMILNADU PUBLIC WORKS DEPARTMENT

TAMIL NADU HOUSING BOARD

NLC INDIA

KOCHI METRO RAIL LIMITED

INDIAN RAILWAYS

GeM Government e Marketplace

TIDCO

ammantry.com

ಸಾಮಾಜಿಕ ಮಾಧ್ಯಮ

**AMMAN-TRY GROUP**

**BILLETS | TMT BARS | RINGS**

**AMMAN-TRY SPONGE AND POWER (P) LTD**


**ಕಾರ್ಪೊರೇಟ್ ಕಚೇರಿ**

ಡೋರ್ ನಂ.15 ಮತ್ತು 16, ಮನಪ್ಪರಂ ಮುಖ್ಯ ರಸ್ತೆ,
ತಿರುಚ್ಚಿ - 620 020
ದೂರವಾಣಿ : 0431 2420022, ಮೊಬೈಲ್ : 755 030 1234
ಇಮೇಲ್ : mktg@ammantry.com

ನಮ್ಮನ್ನು ಇಲ್ಲಿ ಕೂಡ ಸಂಪರ್ಕಿಸಬಹುದು

**ಕಾರ್ಖಾನೆ**

ಸಿರಸನಂಬೇಡು ಗ್ರಾಮ, ಪೆಲ್ಲಕೂರು ಮಂಡಲ್,
ನಾಯ್ಡುಪೇಟ್ - 524 129, ತಿರುಪತಿ ಜಿಲ್ಲೆ, ಆಂಧ್ರ ಪ್ರದೇಶ್
ಮೊಬೈಲ್ : 85559 72490
ಇಮೇಲ್ : info@ammantry.com


PIXELPLUZ_AMMANTRY/LPLS/KANNADA/AUGUST-2026